# 'ಶ್ರೀರಾಮಕೃಷ್ಣ ವಚನವೇದ' ಭಾವಧಾರೆ - 11

ಸ್ವಾಮಿ ನಿತ್ಯಸ್ಥಾನಂದ



ಈಗ ಪರಮಹಂಸರ ನುಡಿಯನ್ನು ಆಲಿಸೋಣ: ''ಈ ಸಂಸಾರ ವಿಶಾಲಾಕ್ಷಿಯ ಸುಳಿ ಹಾಗೆ. ದೋಣಿ ಏನಾದರೂ ಅದಕ್ಕೆ ಸಿಕ್ಕಿತು ಎಂದರೆ ಮೇಲೆ ಏಳುವ ಹಾಗೇ ಇಲ್ಲ. ಮತ್ತೆ ಈ ಸಂಸಾರ ಸೀಗೆ ಮುಳ್ಳಿನ ಹಾಗೆ, ಒಂದರಿಂದ ಬಿಡಿಸಿಕೊಂಡೆ ಎಂದರೆ ಇನ್ನೊಂದರಿಂದ ಚುಚ್ಚಿಸಿಕೊಳ್ಳುತ್ತೀಯೆ. ಬಲಿಚಕ್ರವರ್ತಿಯ ಕೋಟೆಗೆ ಒಮ್ಮೆ ನುಗ್ಗಿದೆ ಎಂದರೆ ಹೊರಕ್ಕೆ ಬರುವುದು ಬಹಳ ಕಷ್ಟ. ಮನುಷ್ಯ ಬರೆಯಿಂದ ಸುಟ್ಟವನ ಹಾಗೆ ಆಗಿ ಬಿಡುತ್ತಾನೆ.''

ಇಲ್ಲಿ ಪರಮಹಂಸರು ಮೂರು ಅತ್ಯಂತ ಸೂಕ್ತ ಉದಾಹರಣೆಗಳ ಮೂಲಕ ಸಂಸಾರವನ್ನು ವರ್ಣಿಸುತ್ತಾರೆ. ಮೊದಲನೆಯದು ವಿಶಾಲಾಕ್ಷಿಯ ಸುಳಿ. ವಿಶಾಲಾಕ್ಷಿ ಎಂದರೆ ಕಾಮಾರಪುಕುರದ ಹತ್ತಿರವಿರುವ ಒಂದು ನದಿ. ಹೇಗೆ ಸುಳಿಯು ನಮ್ಮನ್ನು ಸೆಳೆದು ಸುತ್ತಿಸಿ ಸುತ್ತಿಸಿ ನೀರಿನಲ್ಲಿ ಮುಳುಗಿಸಿ ಬಿಡುತ್ತದೆಯೋ ಹಾಗೆಯೇ ಸಂಸಾರವೆಂಬ ಸುಳಿಯಲ್ಲಿ ಸಿಕ್ಕಿಕೊಂಡರೆ ನಾವು ಅದರಲ್ಲಿ ಮುಳುಗಿ ಹೋಗುತ್ತೇವೆ — ನಮ್ಮನ್ನು ನಾವು ಕಳೆದುಕೊಳ್ಳುತ್ತೇವೆ, ನಾವು ನಾವಾಗಿರುವುದಿಲ್ಲ. ಎರಡನೆಯ ಉದಾಹರಣೆ ಸೀಗೆಕಾಯಿ ಮುಳ್ಳಿನದು. ಇದರ ಅರ್ಥ, ಸಂಸಾರದಲ್ಲಿರುವಾಗ ಒಂದು ಕಷ್ಟ ಮುಗಿಯಿತು ಎಂದರೆ ಇನ್ನೊಂದು ಕಷ್ಟ ಬಂದೆರಗುತ್ತದೆ. ಇನ್ನೊಂದು ಉದಾಹರಣೆ ಬಲಿಚಕ್ರವರ್ತಿಯ ಕೋಟೆ. ಒಳಗೆ ಹೋದರೆ ದಾರಿ ತಪ್ಪಿ ಅಲೆದಾಡಬೇಕಾಗುತ್ತದೆ, ಹೊರಗೆ ಬರಲಾಗುವುದಿಲ್ಲ. ಸಂಸಾರವೂ ನಮ್ಮನ್ನು ದಾರಿ ತಪ್ಪಿಸುತ್ತದೆ, ಗೊತ್ತುಗುರಿಯಿಲ್ಲದೆ ಅಲೆದಾಡಿಸುತ್ತದೆ.

ಈ ಸಂಸಾರದಿಂದ ಪಾರಾಗುವ ಉಪಾಯವೇನು ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರ ಉತ್ತರ, ಸಾಧುಸಂಗ. ಇದನ್ನು ಯಾವಾಗಲೊ ಒಮ್ಮೆ ಮಾಡಿದರೆ ಸಾಲದು. ಯಾವಾಗಲೂ ಸಾಧುಸಂಗದಲ್ಲಿರಬೇಕು. ವೈದ್ಯರೊಡನೆ ಯಾವಾಗಲೂ ಸುತ್ತಾಡುತ್ತಿದ್ದರೆ ಯಾವುದು ಕಫದ ನಾಡಿ, ಯಾವುದು ಪಿತ್ತದ ನಾಡಿ ಎಂಬುದನ್ನು ಅರಿತುಕೊಳ್ಳಬಹುದು - ಎಂದು ಅವರು ಹೇಳುತ್ತಾರೆ. ಸಾಧುಸಂಗದಿಂದ ಸದಸದ್ವಿಚಾರ ಬೆಳೆಯುತ್ತದೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಈ ಜಗತ್ತು ಅಸತ್ ಎಂದರೆ ಅನಿತ್ಯ, ಭಗವಂತನೊಬ್ಬನೇ ಸತ್ — ಹೀಗೆ ವಿಚಾರ ಮಾಡಬೇಕೆಂದು ಅವರು ಹೇಳುತ್ತಾರೆ. ಮಣ್ಣು ಸತ್ಯ-ನಿತ್ಯ, ಮಡಕೆ ಕುಡಿಕೆಗಳು ಅಸತ್ಯ-ಅನಿತ್ಯ. ಮಡಕೆ-ಕುಡಿಕೆಗಳಲ್ಲಿ ಸತ್ಯವಾಗಿರುವುದು ಮಣ್ಣೇ. ಆದರೆ ಮಣ್ಣೂ ಒಂದು ವಿಕಾರವೇ. ಅದರಲ್ಲಿ ಸತ್ಯವಾಗಿರುವುದು ಅಣುಗಳು, ಇವುಗಳಲ್ಲಿ ಸತ್ಯವಾಗಿರುವುದು ಪರಮಾಣುಗಳು. ಹೀಗೆ ವಿಶ್ಲೇಷಿಸುತ್ತ ಹೋದರೆ ಎಲ್ಲ ವಿಕಾರಗಳಿಗೂ ಮೂಲವಾದ ಭಗವತ್‌ತತ್ತ್ವವೊಂದೇ ಉಳಿಯುತ್ತದೆ.

ಅಮೆರಿಕದ ಒಂದು ದ್ವೀಪದಲ್ಲಿ ಕೈದಿಗಳನ್ನು ಇರಿಸುವ ಜೈಲು ಇದೆ. ಅಲ್ಲೂ ಕೈದಿಗಳು ತಂಟೆ ಮಾಡಿದರೆ ಒಂದು ಕತ್ತಲೆಯ ಗುಹೆಯೊಳಗೆ (Darkhole) ಅವರನ್ನು ಕೂಡಿಹಾಕುತ್ತಾರೆ. ಅಲ್ಲಿ ಬೆಳಕು ಮತ್ತು ಶಬ್ದ ಕಿಂಚಿತ್ತೂ ಇರುವುದಿಲ್ಲ. ಅಲ್ಲಿ ಇರುವುದೆಂದರೆ ಅತ್ಯಂತ ದೊಡ್ಡ ಶಿಕ್ಷೆ. ಅಂತಹ ಒಬ್ಬ ಕೈದಿಯನ್ನು ತನಗಾದ ಅನುಭವವನ್ನು ವಿವರಿಸಬೇಕೆಂದು ಕೇಳಿದಾಗ ಅವನು ಹೇಳಿದ: ಅಲ್ಲಿ ಇಂದ್ರಿಯಗಳು ಕೆಲಸ ಮಾಡದೆ ಇರುವುದರಿಂದ ಮನಸ್ಸು ಏನೇನೋ ಕಲ್ಪಿಸಿಕೊಳ್ಳಲು ತೊಡಗುತ್ತದೆ. ಕಲ್ಪನೆಗಳು ಎಷ್ಟು ಸ್ಪಷ್ಟವೂ ವಿಶದವೂ ಆಗಿರುತ್ತವೆಂದರೆ ಅವುಗಳನ್ನು ತನ್ನೊಳಗೆ ಕಾಣದೆ ಹೊರಗಡೆ ನಡೆಯುತ್ತಿರುವಂತೆ ಕಾಣುತ್ತಾನಂತೆ. *(ನೋಡಿ, The Brain, ಪುಟ ೫೬)* ಹಾಗೆಯೇ ನಾವು ಅನುಭವಿಸುತ್ತಿರುವ ಬಾಹ್ಯ ಜಗತ್ತೂ ಮನೋದೃಶ್ಯಗಳೇ. ನಾವು ನೋಡುತ್ತಿರುವುದು ಅಜ್ಞಾನವೆಂಬ ಕತ್ತಲೆಯಲ್ಲಿ ನಿರ್ಮಿಸಿಕೊಂಡಿರುವ ಜಗತ್ತು. 'ದಕ್ಷಿಣಾಮೂರ್ತಿ ಸ್ತೋತ್ರ'ದಲ್ಲಿ ಶ್ರೀಶಂಕರಾಚಾರ್ಯರು ಹೇಳುತ್ತಾರೆ:

**ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ ।**
**ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಯಥಾ ನಿದ್ರಯಾ ॥**

''ಈ ಪ್ರಪಂಚವು ಕನ್ನಡಿಯಲ್ಲಿ ಕಾಣುವ ನಗರಕ್ಕೆ ಸಮಾನವಾದುದು. ಅದು ನಮ್ಮೊಳಗೇ ಇರುವುದಾದರೂ ಮಾಯೆಯ ದೆಸೆಯಿಂದ ಹೊರಗಡೆ ವ್ಯಕ್ತವಾಗಿರುವಂತೆ ಕಾಣುತ್ತೇವೆ — ಕನಸಿನಲ್ಲಿ ಹೇಗೋ ಹಾಗೆ.''

ಎಲ್ಲವೂ ಅಸತ್ಯವಾದರೆ ಯಾವುದನ್ನು ನೆಚ್ಚಿಕೊಳ್ಳುವುದು?

ಶಾಸ್ತ್ರವೂ ಅಸತ್ಯ, ಸಾಧನೆಯೂ ಅಸತ್ಯ, ದೇವರ ರೂಪಗಳೂ ಅಸತ್ಯ. ಈ ವಿಷಯದಲ್ಲಿ ನಾವು ಹಂತಹಂತವಾಗಿ ಮುಂದುವರಿಯಬೇಕು. ಮೊದಲನೆಯ ಹಂತದಲ್ಲಿ ವಿಷಯಸುಖಕ್ಕಿಂತ ಮಾನವೀಯ ಸಂಬಂಧ ಅತ್ಯಂತ ಮುಖ್ಯವೂ ಸತ್ಯವೂ ಆಗಬೇಕು — ಅದು ಜೀವನಪರ್ಯಂತ ಇರುವಂತಹುದು. ಮುಂದೆ ಮಾನವೀಯ ಸಂಬಂಧವೂ ಅಶಾಶ್ವತ. ದಿವ್ಯ ಸಂಬಂಧಕ್ಕೆ ಹೆಚ್ಚು ಒತ್ತು ಕೊಟ್ಟಾಗ, ವಿಷಯಸುಖ ಗೌಣವಾಗಿ ಮಾನವೀಯ ಸಂಬಂಧವೂ ಉತ್ತಮವಾಗುತ್ತದೆ. ಇನ್ನೂ ಮುಂದುವರಿದಾಗ ರೂಪಾದಿಗಳೆಲ್ಲವೂ ಗೌಣವಾಗಿ, ಭಗವದ್ವಸ್ತುವೊಂದೇ ಅತ್ಯಂತ ಸತ್ಯವಾಗಿ ಉಳಿಯುತ್ತದೆ. ಶ್ರೀ ವಿದ್ಯಾರಣ್ಯರು ಹೀಗೆ ಹೇಳುತ್ತಾರೆ:

**ಜೀವದ್ವೈತಂ ತು ಶಾಸ್ತ್ರೀಯಮಶಾಸ್ತ್ರೀಯಮಿತಿ ದ್ವಿಧಾ ।**
**ಉಪಾದದೀತ ಶಾಸ್ತ್ರೀಯಮಾಽಽತತ್ತ್ವಸ್ಯಾವಬೋಧನಾತ್ ॥**

*(ಪಂಚದಶೀ, ೪.೪೩)*

''ಜೀವದ್ವೈತವೆಂದರೆ ಈ ದೃಶ್ಯಜಗತ್ತು ಶಾಸ್ತ್ರೀಯ ಮತ್ತು ಅಶಾಸ್ತ್ರೀಯ ಎಂದು ಎರಡು ವಿಧ. ತತ್ತ್ವಜ್ಞಾನ ಉಂಟಾಗುವವರೆಗೆ ಶಾಸ್ತ್ರೀಯವನ್ನು ಎಂದರೆ ಆಧ್ಯಾತ್ಮಿಕ ಸಾಧನೆಗೆ ಸಂಬಂಧಿಸಿರುವುದನ್ನು ಇಟ್ಟುಕೊಳ್ಳಬೇಕು.''

ಇದನ್ನೇ ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ, ನಾವು ಜಪ ಮಾಡುತ್ತಿರುವಾಗ, ನಾಮಜಪವು ಸತ್ಯಕ್ಕೆ ಸಂಬಂಧಿಸಿದುದು, ಬೇರೆ ಆಲೋಚನೆಗಳು ಅಸತ್ಯ, ಅನಿತ್ಯ, ಅಲ್ಪ, ಶೂನ್ಯ (empty thoughts) ಎಂದು ಭಾವಿಸಬೇಕು. ಹಾಗೆಯೇ ಭಗವಂತನ ರೂಪವನ್ನು ಧ್ಯಾನಿಸುತ್ತಿರುವಾಗ, ಆ ರೂಪವೊಂದೇ ಸತ್ಯ, ಉಳಿದ ರೂಪಗಳು, ಆಲೋಚನೆಗಳೆಲ್ಲ ಅಸತ್ಯ, ಅನಿತ್ಯ, ಅಲ್ಪ, ಶೂನ್ಯ ಎಂಬಿತ್ಯಾದಿಯಾಗಿ ಭಾವಿಸಬೇಕು. ಪರಮಹಂಸರು ಹೇಳುವಂತೆ, ಮನಸ್ಸು ಅಸತ್ಯದ ಕಡೆ ಹೋಗದಂತೆ ಅಂಕುಶ ಹಾಕಬೇಕು. ''ಆನೆ ಬೇರೆಯವರ ತೋಟದಲ್ಲಿರುವ ಬಾಳೆ ಗಿಡಗಳ ಕಡೆ ನೋಡಿ ಸೊಂಡಿಲು ನೀಡಿತು ಎಂದರೆ, ಅದಕ್ಕೆ ಮಾವಟಿಗನ ಅಂಕುಶದೇಟು ಬೀಳುತ್ತದೆ.'' ಸಾಮಾನ್ಯವಾಗಿ ಮನಸ್ಸನ್ನು ಮತ್ತ ಆನೆಗೆ ಹೋಲಿಸುವುದುಂಟು. **ಮನ ವಾರಣ ಶಾಸನ ಅಂಕುಶ ಹೇ**–''ನೀನು ಮನಸ್ಸೆಂಬ ಆನೆಯನ್ನು ಹತೋಟಿಯಲ್ಲಿಡುವ ಅಂಕುಶದಂತೆ'' ಎಂದು ಶ್ರೀರಾಮಕೃಷ್ಣರನ್ನು ಒಂದು ಸ್ತೋತ್ರದಲ್ಲಿ ವರ್ಣಿಸಲಾಗಿದೆ.

ನೆರೆಯವನು, ''ಮಹಾಶಯರೇ, ಪಾಪಬುದ್ಧಿ ಏಕೆ ಬರುತ್ತದೆ?'' ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರು ಹೇಳುತ್ತಾರೆ: ''ಆತನ ಸೃಷ್ಟಿಯಲ್ಲಿ ಎಲ್ಲವೂ ಇದೆ. ಸಾಧುಗಳನ್ನು ಆತನೇ ಸೃಷ್ಟಿಸಿದ್ದಾನೆ; ದುಷ್ಟರನ್ನೂ ಆತನೇ ಸೃಷ್ಟಿಸಿದ್ದಾನೆ. ಸದ್ಬುದ್ಧಿ ಕೊಡುವವನೂ ಅವನೇ; ದುರ್ಬುದ್ಧಿ ಕೊಡುವವನೂ ಅವನೇ.'' ''ಹಾಗಾದರೆ, ಪಾಪಕಾರ್ಯಕ್ಕೆ ನಾವೇನೂ ಹೊಣೆಗಾರರಲ್ಲ, ಅಲ್ಲವೆ?'' ಎಂದು ನೆರೆಯವನು ಕೇಳುತ್ತಾನೆ. ಅದಕ್ಕೆ ಪರಮಹಂಸರ ಉತ್ತರ: ''ಭಗವಂತನ ನಿಯಮ, ಪಾಪ ಮಾಡಿದೆ ಎಂದರೆ ಅದರ ಫಲ ಅನುಭವಿಸಬೇಕಾಗುತ್ತದೆ. ಮೆಣಸಿನಕಾಯಿ ತಿಂದರೆ ಬಾಯಿಗೆ ಖಾರ ಹತ್ತುವುದಿಲ್ಲವೆ? ಮಥುರಬಾಬು ಯೌವನದಲ್ಲಿ ಏನೇನೋ ಮಾಡಿದ್ದ. ಆದ್ದರಿಂದ ಕೊನೆಗಾಲದಲ್ಲಿ ಅವನಿಗೆ ರೋಗ ಬಂತು. ಯೌವನಾವಸ್ಥೆಯಲ್ಲಿ ಇದು ಗೊತ್ತಾಗದೆ ಹೋಗಬಹುದು. ಕಾಳೀದೇವಾಲಯದಲ್ಲಿ ಅಡಿಗೆಗೆ ಉರುಟು ಸೌದೆ ಉಪಯೋಗಿಸುವುದನ್ನು ನೋಡಿದ್ದೇನೆ. ಮೊದಮೊದಲು ಸೌದೆ ನೆನೆದಿದ್ದರೂ ಚೆನ್ನಾಗಿಯೇ ಉರಿಯುತ್ತದೆ. ಅದರಲ್ಲಿ ನೀರಿರುವ ಹಾಗೆ ತೋರುವುದಿಲ್ಲ. ಆದರೆ ಸಾಕಾದಷ್ಟು ಉರಿಯುವುದರೊಳಗೆ ನೀರು ಅದರ ತುದಿಗೆ ಬಂದುಬಿಟ್ಟಿರುತ್ತದೆ. ಕೊನೆಗೆ 'ಚೊಂಯ್, ಚೊಂಯ್' ಅಂತ ನೀರು ಸೌದೆಯಿಂದ ಹೊರಕ್ಕೆ ಬಂದು ಒಲೆಯನ್ನು ಆರಿಸಿಬಿಡುತ್ತದೆ.'' ಈ ವಿಷಯವನ್ನು ಪ್ರಸಿದ್ಧ ಅನ್ವಯಾತ್ಮಕ ಮನಶ್ಶಾಸ್ತ್ರಜ್ಞನಾದ ಮಾರ್ಟಿನ್ ಸೆಲಿಗ್ಮಾನ್ *(Positive Psychologist, Martin Seligman)* ಹೇಳಿರುವ ಮಾತು ಸಮರ್ಥಿಸುತ್ತದೆ: ''ನಾವು ನೋಡಿರುವಂತೆ, ಅರುವತ್ತನೆ ವಯಸ್ಸಿನಲ್ಲಿ ಒಬ್ಬ ವ್ಯಕ್ತಿಯ ಆರೋಗ್ಯವು ಇಪ್ಪ

ತೈದನೆ ವಯಸ್ಸಿನಲ್ಲಿ ಅವನ ಮನೋಭಾವ ಹೇಗಿತ್ತು ಎಂಬು ದನ್ನು ಅವಲಂಬಿಸಿರುತ್ತದೆ.''

ಶ್ರೀರಾಮಕೃಷ್ಣರು ಮಾತು ಮುಂದುವರಿಸುತ್ತ, ಕಾಮ, ಕ್ರೋಧ, ಲೋಭ ಈ ಮೂರರ ಬಗ್ಗೆ ಬಹಳ ಎಚ್ಚರಿಕೆಯಿಂದಿರ ಬೇಕು ಎಂದು ಹೇಳುತ್ತಾರೆ.

ಈ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಸಂಸ್ಕೃತ ಸುಭಾ ಷಿತ ಶ್ಲೋಕ ಮನಸ್ಸಿಗೆ ಬರುತ್ತದೆ:

**ಕಾಮಕ್ರೋಧಸ್ತಥಾ ಲೋಭಃ ದೇಹೇ ತಿಷ್ಠಂತಿ ತಸ್ಕರಾಃ ।**
**ಜ್ಞಾನರತ್ನಾಪಹಾರಿಣಃ ತಸ್ಮಾತ್ ಜಾಗ್ರತ ಜಾಗ್ರತ॥**

''ಕಾಮ, ಕ್ರೋಧ ಮತ್ತು ಲೋಭ ಎಂಬ ಮೂವರು ಕಳ್ಳರು ದೇಹದಲ್ಲಿದ್ದಾರೆ. ಅವರು ಜ್ಞಾನವೆಂಬ ರತ್ನವನ್ನು ಅಪಹರಿಸು ವವರು. ಆದ್ದರಿಂದ ಜಾಗ್ರತವಾಗಿರು, ಕಟ್ಟೆಚ್ಚರದಿಂದಿರು.''

ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಕಾಮ, ಕ್ರೋಧ ಮತ್ತು ಲೋಭ ಇವು ನರಕದ ಮೂರು ಬಾಗಿಲುಗಳು ಎಂದು ಹೇಳು ತ್ತಾನೆ *(೧೬.೨೧)*. ಜನರು ನರಕಕ್ಕೆ ಹಿಂಡುಹಿಂಡಾಗಿ ಹೋಗು ವುದರಿಂದ ದೇವರು ಅದಕ್ಕೆ ಮೂರು ಬಾಗಿಲುಗಳನ್ನು ಇಟ್ಟಿ ದ್ದಾನೆ! ಈ ಸಂದರ್ಭದಲ್ಲಿ ಬೃಹದಾರಣ್ಯಕ ಉಪನಿಷತ್ತಿನ ಕಥೆ ನೆನಪಿಗೆ ಬರುತ್ತದೆ. ದೇವತೆಗಳು, ರಾಕ್ಷಸರು ಮತ್ತು ಮನು ಷ್ಯರು ಪ್ರಜಾಪತಿಯ ಬಳಿಸಾರಿ ತಮಗೆ ಉಪದೇಶಿಸಬೇಕೆಂದು ವಿನಂತಿಸಿಕೊಂಡರು. ಪ್ರಜಾಪತಿಯು ನಮ್ಮಂತೆ ವಾಚಾಳಿ ಯಾಗಿರಲಿಲ್ಲ. ತುಂಬ ಮಿತಭಾಷಿ. ಅವನು ನೀಡಿದ ಉಪದೇಶ ಅತ್ಯಂತ ಸಂಕ್ಷಿಪ್ತವಾಗಿತ್ತು – ಒಂದು ವಾಕ್ಯವೂ ಅಲ್ಲ, ಒಂದು ಶಬ್ದವೂ ಕೂಡ ಅಲ್ಲ, ಕೇವಲ ಒಂದೇ ಒಂದು ಅಕ್ಷರದಿಂದ ಉಪದೇಶಿಸಿದನು: ಆ ಅಕ್ಷರವೇ 'ದ'! ಪ್ರಜಾಪತಿಯು ಕೇವಲ ಮಾತಿನ ಮೂಲಕ ಉಪದೇಶಿಸಲಿಲ್ಲ. ತನ್ನ ಅಂತರ್ಬೋಧೆಯ ಮೂಲಕ ಉಪದೇಶಿಸಿದನು. ಇದರ ಪರಿಣಾಮವಾಗಿ ಆ ಮೂವರೂ ತಮ್ಮ ಸ್ವಭಾವಕ್ಕೆ ವಿರುದ್ಧವಾಗಿ ಆ ಅಕ್ಷರಕ್ಕೆ ಅರ್ಥ ವನ್ನು ಕಲ್ಪಿಸಿಕೊಂಡರು. ದೇವತೆಗಳ ಸ್ವಭಾವ ಇಂದ್ರಿಯ ಸುಖವನ್ನು ಅನುಭವಿಸುವುದು (ಕಾಮ). ಅದರಲ್ಲೇ ಅವರು ಮತ್ತರಾಗಿರುತ್ತಾರೆ. ಹಾಗಾಗಿ ಅವರು ದುರ್ಬಲರಾಗಿರುತ್ತಾರೆ, ಈ ಕಾರಣಕ್ಕಾಗಿ ರಾಕ್ಷಸರು ಬಂದು ಅವರನ್ನು ಮುತ್ತಿದಾಗ ಸೋತು ಓಡಿಹೋಗುತ್ತಾರೆ. ಆದ್ದರಿಂದ 'ದ' ಎಂಬ ಅಕ್ಷರದಿಂದ ಅವರು ಅರ್ಥಮಾಡಿಕೊಂಡರು, 'ದಾಮ್ಯತಾಂ' ಎಂದು, ಅಂದರೆ ಇಂದ್ರಿಯಗಳನ್ನು ನಿಗ್ರಹಿಸಿ ಎಂದು. ರಾಕ್ಷಸರ ಸ್ವಭಾವ ಕ್ರೌರ್ಯ (ಕ್ರೋಧ). ಆದ್ದರಿಂದ ಅವರು 'ದ' ಎಂಬ ಅಕ್ಷರಕ್ಕೆ ಕಲ್ಪಿಸಿಕೊಂಡ ಅರ್ಥ, 'ದಯಧ್ವಂ' ಎಂದರೆ ದಯೆತೋರಿ ಎಂದು. ಮನುಷ್ಯ ಲೋಭಿ, ಆದ್ದರಿಂದ ಅವನಿಗೆ 'ದ' ಎಂಬ ಅಕ್ಷರವು 'ದತ್ತ' – ದಾನಮಾಡು ಎಂಬ ಉಪದೇಶವನ್ನು ನೀಡಿತು. ಮನುಷ್ಯನಲ್ಲೇ ಈ ಮೂರೂ ಸ್ವಭಾವಗಳು ಇರು ವುದರಿಂದ ಈ ಮೂರೂ ಉಪದೇಶಗಳು ಅವನಿಗೇ ಅನ್ವಯ ವಾಗುತ್ತದೆ.

''ಭಗವಂತನು ದುಷ್ಟರನ್ನೇಕೆ ಸೃಷ್ಟಿಮಾಡಿದ'' ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರು ಉತ್ತರಿಸುತ್ತಾರೆ: ''ಆತನ ಇಚ್ಛೆ, ಆತನ ಲೀಲೆ. ಆತನ ಮಾಯೆಯಲ್ಲಿ ವಿದ್ಯೆಯೂ ಇದೆ. ಅಂಧಕಾರದ ಆವಶ್ಯಕತೆಯೂ ಇದೆ. ಅದು ಬೆಳಕಿನ ಮಹತ್ವನ್ನು ಇನ್ನೂ ಹೆಚ್ಚಾಗಿ ಪ್ರಕಾಶಗೊಳಿಸುತ್ತದೆ. ಕಾಮ, ಕ್ರೋಧ, ಲೋಭ ಇವು ಕೆಟ್ಟದ್ದೇನೋ ನಿಜ. ಹಾಗಾದರೇಕೆ ಅವನ್ನು ಸೃಷ್ಟಿಸಿದ್ದಾನೆ ಅಂತೀಯ? ಮಹಾಪುರುಷರನ್ನಾಗಿ ತಯಾರು ಮಾಡಲು. ಇಂದ್ರಿಯಗಳನ್ನು ಗೆದ್ದರೆ ಮನುಷ್ಯ ಮಹಾಪುರುಷನಾಗುತ್ತಾನೆ. ಜಿತೇಂದ್ರಿಯನ ಕೈಯಲ್ಲಿ ಏನು ತಾನೆ ಸಾಧ್ಯವಿಲ್ಲ! ಭಗವಂತನ ಸಾಕ್ಷಾತ್ಕಾರವೂ ಆತನ ಕೃಪೆಯಿಂದ ದೊರೆತುಬಿಡುತ್ತದೆ. ಮತ್ತೆ ಬೇರೆ ದೃಷ್ಟಿ ಯಿಂದ ನೋಡು, ಕಾಮದಿಂದಲೇ ಆತನ ಸೃಷ್ಟಿಲೀಲೆ ಮುಂದು ವರಿಯುತ್ತದೆ.''

ಸಾಮಾನ್ಯವಾಗಿ ಈ ಜಗತ್ತನ್ನು ಒಂದು ನಾಟಕ, ಭಗವಂತನೇ ಅದರ ಸೂತ್ರಧಾರ ಎಂದು ವರ್ಣಿಸುವುದುಂಟು. ಖಳನಾಯಕ ನಿಲ್ಲದಿದ್ದರೆ ನಾಟಕಕ್ಕೆ ಕಳೆಕಟ್ಟುವುದಿಲ್ಲ. ಅವನಿಂದ ಕಥಾನಾಯ ಕನ ಮಹಿಮೆ ಎದ್ದುತೋರುತ್ತದೆ. ಒಂದು ಬಣ್ಣವು ಎದ್ದುಕಾಣ ಬೇಕಾದರೆ, ಅದಕ್ಕೆ ಅಸಮಾನವಾದ ಇನ್ನೊಂದು ಬಣ್ಣ ಅದರ ಪಕ್ಕದಲ್ಲೋ ಹಿನ್ನೆಲೆಯಲ್ಲೋ ಇರಬೇಕಾಗುತ್ತದೆ. ರಾವಣ ಇಲ್ಲ ದಿದ್ದರೆ ರಾಮನ ಮಹಿಮೆ ಇಷ್ಟೊಂದು ಜಾಜ್ವಲ್ಯವಾಗಿ ಬೆಳಗು ತ್ತಿತ್ತೆ? ಸೀತೆ ಇಷ್ಟೊಂದು ಪೂಜಿಸಲ್ಪಡುತ್ತಿದ್ದಳೆ? ಕೈಕೇಯಿ, ಮಂಥರೆ ಮುಂತಾದವರು ಇಲ್ಲದಿದ್ದರೆ ರಾಮಾಯಣ ಕಾವ್ಯವೇ ನಮಗೆ ಸಿಗುತ್ತಿರಲಿಲ್ಲ. ಅವರಿಗೆ ನಾವು ಕೃತಜ್ಞರಾಗಿರಬೇಕು.

ಕೋಪದಲ್ಲಿ ಎರಡು ವಿಧ: ಇತರರ ಮೇಲೆ ನಮಗಿರುವ ಕೋಪ, ಹಾಗೂ ಇತರರಿಗೆ ನನ್ನ ಮೇಲಿರುವ ಕೋಪ. ಮೊದ ಲನೆಯದರಿಂದ ನನಗೇ ಹಾನಿ, ಇದು ಇತರರು ಮಾಡಿದ ತಪ್ಪಿಗೆ ನಾನು ಶಿಕ್ಷೆ ಅನುಭವಿಸಿದಂತೆ. ಎರಡನೆಯ ಕೋಪಕ್ಕೆ ನಾನು ನಿಜವಾಗಿಯೂ ಅರ್ಹನಾಗಿರುತ್ತೇನೆ, ಏಕಂದರೆ ನಾನೇನೂ ಸಂಪೂರ್ಣ ದೋಷಮುಕ್ತನಲ್ಲ. ಈ ಸಂದರ್ಭದಲ್ಲಿ ಆಂಗ್ಲ ಭಾಷೆಯ ಒಂದು ಹೇಳಿಕೆ ನೆನಪಿಗೆ ಬರುತ್ತದೆ. ''ನಿನ್ನನ್ನು ಪ್ರೀತಿಸುವವರನ್ನು ನೀನು ಪ್ರೀತಿಸು, ಏಕೆಂದರೆ ನಿನ್ನಲ್ಲಿರುವ ಯಾವುದೋ ಒಂದನ್ನು ಅವರು ಇಷ್ಟಪಡುತ್ತಾರೆ, ಅದನ್ನು ನೀನು ಬೆಳಸಿಕೊ. ನಿನ್ನನ್ನು ದ್ವೇಷಿಸುವವರನ್ನು ಪ್ರೀತಿಸು, ಏಕೆಂ ದರೆ, ನಿನ್ನಲ್ಲಿರುವ ಯಾವುದೋ ಒಂದನ್ನು ಅವರು ದ್ವೇಷಿಸು ತ್ತಾರೆ, ಅದನ್ನು ಬದಲಾಯಿಸು.''

''ಸಂಸಾರದಲ್ಲಿದ್ದು ಭಗವಂತನ ಸಾಕ್ಷಾತ್ಕಾರವನ್ನು ಪಡೆ ಯಲು ಸಾಧ್ಯವೆ?'' ಎಂಬ ಪ್ರಶ್ನೆಗೆ ಉತ್ತರಿಸುತ್ತಾ, ಶ್ರೀರಾಮ ಕೃಷ್ಣರು ಒಂದು ಸುಂದರವಾದ ಉದಾಹರಣೆಯನ್ನು ಕೊಡು ತ್ತಾರೆ, ''ಮನಸ್ಸು ಮಣ್ಣು ಹಿಡಿದ ಸೂಜಿ ಇದ್ದ ಹಾಗೆ. ಭಗವಂತ

ಚುಂಬಕದ ಹಾಗೆ. ಮಣ್ಣು ತೊಳೆದು ಹೋಗುವವರೆಗೆ ಸೂಜಿ ಚುಂಬಕದೊಡನೆ ಐಕ್ಯವಾಗಲಾರದು. ಅಳುತ್ತ ಅಳುತ್ತ ಸೂಜಿಯ ಮಣ್ಣು ತೊಳೆದುಹೋಗುತ್ತದೆ. ಸೂಜಿಯ ಮಣ್ಣು ಎಂದರೆ ಕಾಮ, ಕ್ರೋಧ, ಲೋಭ, ಪಾಪಬುದ್ಧಿ. ಮಣ್ಣು ತೊಳೆದು ಹೋದೊಡನೆಯೇ ಸೂಜಿಯನ್ನು ಚುಂಬಕ ಎಳೆದುಕೊಂಡು ಬಿಡುತ್ತದೆ. ಎಂದರೆ ಭಗವಂತನ ದರ್ಶನ ದೊರೆಯುತ್ತದೆ. ಚಿತ್ತಶುದ್ಧಿ ಆಯಿತು ಎಂದರೆ ಆತನ ಸಾಕ್ಷಾತ್ಕಾರ ದೊರೆತು ಬಿಡುತ್ತದೆ.''

ಶ್ರೀರಾಮಕೃಷ್ಣರ ಈ ಸೂಜಿ ಮತ್ತು ಚುಂಬಕದ ಉದಾಹರಣೆ ತುಂಬ ಅರ್ಥಗರ್ಭಿತವಾದುದು. ಸೂಜಿ ಕಬ್ಬಿಣದ ವಸ್ತು. ಮನಸ್ಸೆಂಬ ಕಬ್ಬಿಣಕ್ಕೆ ವಿಷಯಸಂಗದ ತೇವದಿಂದ ತುಕ್ಕು ಹಿಡಿಯುತ್ತದೆ. ಅದೊಂದು ರಾಸಾಯನಿಕ ಕ್ರಿಯೆ, ಆಗ ಅದರ ಸ್ವರೂಪವೇ ಬದಲಾಗುತ್ತದೆ. ಅದು ನಮ್ಮನ್ನು ಮೋಸಪಡಿಸುತ್ತದೆ, ನಂಬಿಕೆಗೆ ಅನರ್ಹವಾಗುತ್ತದೆ. (not trustworthy-trust ಪದದಲ್ಲಿನ T ಎಂದರೆ trust, ತೆಗೆದು ಹಾಕಿದರೆ rust (ತುಕ್ಕು) ಆಗುತ್ತದೆ.) RCC ಯಲ್ಲಿರುವ ಕಬ್ಬಿಣಕ್ಕೆ ತುಕ್ಕು ಹಿಡದರೆ ಮನೆಯೇ ಕುಸಿದು ಬೀಳುತ್ತದೆ. ಹಾಗೆಯೇ ಮನಸ್ಸಿಗೆ ತುಕ್ಕು ಹಿಡಿದರೆ ಈ ವ್ಯಕ್ತಿತ್ವವೆಂಬ ಮನೆಯೇ ಕುಸಿಯುತ್ತದೆ. ಅದನ್ನು ಉಕ್ಕಾಗಿ ಪರಿವರ್ತಿಸಿದರೆ ತುಕ್ಕು ಹಿಡಿಯುವುದಿಲ್ಲ. ವೈರಾಗ್ಯದ ಮೂಲಕ ನಮ್ಮ ಮನಸ್ಸಿಗೆ ತುಕ್ಕು ಹಿಡಿಯದಂತೆ ನೋಡಿಕೊಳ್ಳಬೇಕು. ಸಾಮಾನ್ಯ ಮನಸ್ಸು ಕಬ್ಬಿಣದ ಪಾತ್ರೆಯಂತೆ, ಅದರಲ್ಲಿ ಆಹಾರ ಪದಾರ್ಥಗಳನ್ನು ಇಡಲಾಗುವುದಿಲ್ಲ. ಹಾಗೆಯೇ ಸಾಮಾನ್ಯರಲ್ಲಿ ಕಲುಷಿತವಾಗುತ್ತದೆ- ಮೂಢ ನಂಬಿಕೆಗಳಿಂದ ತುಂಬಿದ ಗೊಡ್ಡು ಆಚರಣೆಗಳ ತಾಣವಾಗುತ್ತದೆ. ಆಧ್ಯಾತ್ಮಿಕ ಸಾಧನೆಗಳ ಮೂಲಕ ಅದನ್ನು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಯಾಗಿ ಪರಿವರ್ತಿಸಿದರೆ, ಆಗ ಅದರಲ್ಲಿ ಧರ್ಮ ಪರಿಶುದ್ಧವಾಗಿ ಉಳಿಯುತ್ತದೆ. ಕಬ್ಬಿಣ ಗಟ್ಟಿತನಕ್ಕೆ ಪ್ರಸಿದ್ಧಿ- ಮನಸ್ಸೂ ಕಬ್ಬಿಣದಂತೆ ಗಟ್ಟಿಯಾಗಿರಬೇಕು. ಆದರೆ ಕಬ್ಬಿಣದ ಸರಳು ಬಾಗುವಂತೆ ನಮ್ಮಲ್ಲಿ ನಮ್ರತೆಯೂ ಇರಬೇಕು. ಮನಸ್ಸು ಶುದ್ಧವಾದಾಗ ಚುಂಬಕವು (ದೇವರು) ಅವನ್ನು ಆಕರ್ಷಿಸುತ್ತದೆ. ನಮ್ಮೊಳಗೆ ಈ ಆಕರ್ಷಣೆಯನ್ನು ಭಾವಿಸುವುದನ್ನೇ ಭಗವದ್ವ್ಯಾಕುಲತೆ ಎಂದು ಕರೆಯುವುದು. ಅಯಸ್ಕಾಂತದ ಸಂಪರ್ಕದಿಂದ ವ್ಯಕ್ತಿಯೂ ಈ ಅಯಸ್ಕಾಂತೀಯ ನಾಗುತ್ತಾನೆ. ಅಯಸ್ಕಾಂತ ತಾನು ಚಲಿಸದೆ ಆಕರ್ಷಿಸುತ್ತದೆ. ಶ್ರೀರಾಮಕೃಷ್ಣರದು ಅಂತಹ ಚುಂಬಕ ವ್ಯಕ್ತಿತ್ವ.

ಶ್ರೀರಾಮಕೃಷ್ಣರು ಹೇಳುತ್ತಾರೆ: ''ಯಾವುದಕ್ಕೆ ಜ್ಞಾನ ಅಂತ ಹೆಸರು? ನಾನು ಎಂಬುದರ ಸ್ವರೂಪವೇನು? 'ಭಗವಂತನೊಬ್ಬನೇ ಕರ್ತ, ಉಳಿದವರೆಲ್ಲರೂ ಅಕರ್ತರೇ' — ಇದೇ ಜ್ಞಾನ; ನಾನು ಅಕರ್ತ, ಆಕೆಯ ಕೈಯ ಯಂತ್ರ. ಅದಕ್ಕಾಗಿಯೇ ನಾನು ಹೇಳುವುದು: 'ತಾಯೆ, ನೀನು ಯಂತ್ರಿ; ನಾನು ಯಂತ್ರ ; ನೀನು ಗೃಹಿಣಿ; ನಾನು ಗೃಹ; ನೀನು ಚಾಲಕ, ನಾನು ಗಾಡಿ; ಚಲಿಸಿದಂತೆ ಚಲಿಸುತ್ತೇನೆ; ನುಡಿದಂತೆ ನುಡಿಯುತ್ತೇನೆ; ನಾನಲ್ಲ,ನಾನಲ್ಲ, ನೀನು, ನೀನು.' ''

ಇಲ್ಲಿ ಶ್ರೀರಾಮಕೃಷ್ಣರು ಜ್ಞಾನದ ಕುರಿತಾಗಿ ಒಂದು ವಿಶಿಷ್ಟವಾದ ಮೀಮಾಂಸೆಯನ್ನು ನೀಡುತ್ತಾರೆ ಅವರ ಪ್ರಕಾರ ಜ್ಞಾನವೆಂದರೆ ಏನನ್ನೋ ಪಡೆದುಕೊಳ್ಳುವುದಲ್ಲ, ಕಳೆದುಕೊಳ್ಳುವುದು. 'ನಾನು' ಹೋಗುವುದೇ ಜ್ಞಾನ. ಓರ್ವ ಸೂಫಿ ಸಂತನಾದ ಹಫೀಸ್‌ನ ಮಾತು ತುಂಬ ಔಚಿತ್ಯಪೂರ್ಣವಾಗಿದೆ: ''ಕ್ರಿಸ್ತನ ಉಸಿರು ಚಲಿಸುವ ಕೊಳಲಿನಲ್ಲಿರುವ ರಂಧ್ರವೇ ನಾನು. ಈ ಸಂಗೀತವನ್ನು ಆಲಿಸಿ.'' ರಂಧ್ರಕ್ಕೆ ನಿಜವಾದ ಅಸ್ತಿತ್ವವಿಲ್ಲ, ಅದು ಕೇವಲ ಹೆಸರು ಮಾತ್ರ. ಆದರೆ ಆ ರಂಧ್ರವೇ ಕೊಳಲಲ್ಲಿ ಸುಂದರ ಗಾನ ಹೊರಹೊಮ್ಮುವಂತೆ ಮಾಡುತ್ತದೆ. ಹಾಗೆಯೇ 'ನಾನು' ಎನ್ನುವುದಕ್ಕೆ ನಿಜವಾದ ಅಸ್ತಿತ್ವವಿಲ್ಲ. ಈ ಭ್ರಮಾತ್ಮಕ 'ನಾನು' ತನ್ನನ್ನು ತಾನು ಕಳೆದುಕೊಂಡಾಗ ರಂಧ್ರದಂತಾದಾಗ — ಭಗವಂತನ ಉಸಿರು ನಮ್ಮ ಮೂಲಕ ಕೆಲಸ ಮಾಡಲು ಪ್ರಾರಂಭಿಸುತ್ತದೆ. ಆಗ ನಮ್ಮ ಕರ್ತೃತ್ವಭಾವ ಹೊರಟುಹೋಗುತ್ತದೆ. ಈ 'ನಾನು'ವನ್ನೇ ಬಿಡಬೇಕಾದರೆ, ಮೊದಲು ಅದನ್ನು ಪಡೆಯಬೇಕು. ಆಲೋಚನೆಗಳ, ಘಟನೆಗಳ ಪ್ರವಾಹದಲ್ಲಿ ನಮ್ಮನ್ನು ನಾವು ಕಳೆದುಕೊಳ್ಳುತ್ತೇವೆ. ಈ ಕಳೆದುಹೋದ ನನ್ನನ್ನು ಮರಳಿ ಪಡೆದು ಅದನ್ನು ಭಗವತ್ಸಾಗರದಲ್ಲಿ ಕರಗಿಸುವುದೇ ಆಧ್ಯಾತ್ಮಿಕ ಜೀವನ. ಸಾಮಾನ್ಯಾರ್ಥದಲ್ಲಿ ಜ್ಞಾನವೆಂದರೆ ಹೊರಗಿನಿಂದ ಪಡೆಯುತ್ತ ಹೋಗುವುದು, ಆಧ್ಯಾತ್ಮಿಕ ದೃಷ್ಟಿಯಿಂದ ಪಡೆದುದನ್ನೆಲ್ಲ ಕಳೆದುಕೊಳ್ಳುವುದು. ಕೊನೆಗೆ ಯಾವುದರ ಮೂಲಕ ಮತ್ತು ಯಾವುದಕ್ಕಾಗಿ ಪಡೆಯುತ್ತೇವೆಯೋ ಅದನ್ನು ಬಿಟ್ಟುಬಿಡುವುದು.

ಶ್ರೀರಾಮಕೃಷ್ಣರು ಹೇಳುತ್ತಾರೆ: ''ಎಲ್ಲರಿಗೂ ಮುಕ್ತಿ ದೊರೆಯುತ್ತದೆ. ಆದರೆ ಗುರುವಿನ ಉಪದೇಶಕ್ಕನುಸಾರ ನಡೆದುಕೊಳ್ಳಬೇಕು.'' ನಾವು ಯಾವುದೊ ಊರಿಗೆ ಹೋಗಬೇಕಾಗಿದ್ದಾಗ ಮಧ್ಯದಲ್ಲಿ ದಾರಿ ತಪ್ಪಿದರೆ ಸುತ್ತಿ ಸುತ್ತಿ ಎಷ್ಟೊಂದು ಕಷ್ಟಪಡಬೇಕಾಗುತ್ತದೆ ಎಂಬುದು ನಮ್ಮೆಲ್ಲರಿಗೂ ತಿಳಿದಿರುವ ವಿಷಯ. ಇತ್ತೀಚೆಗೆ ಅಪರಿಚಿತ ಸ್ಥಳಗಳಲ್ಲಿ ದಾರಿ ತಿಳಿಯದಿದ್ದರೆ GPS ಉಪಯೋಗಿಸುತ್ತಾರೆ. ಅದು ಯಾವ ದಿಕ್ಕಿಗೆ ಹೋಗಬೇಕು ಎಂದು ಉದ್ದಕ್ಕೂ ಮಾರ್ಗದರ್ಶನ ಮಾಡುತ್ತಾ ಹೋಗುತ್ತದೆ. ಇದೇ ರೀತಿ ಆಧ್ಯಾತ್ಮಿಕ ಗುರಿಯನ್ನು ಮುಟ್ಟಲು ಗುರುವನ್ನು ಆಶ್ರಯಿಸಬೇಕು. ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಜನಕಾದಿಗಳು ಸಾಂಸಾರಿಕ ಕೆಲಸಗಳನ್ನೂ ಮಾಡಿದರು. ಆದರೆ ಭಗವಂತನನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಾಡಿದರು — ನರ್ತಕಿ ತಲೆಯ ಮೇಲೆ ಪಾತ್ರೆ ಇಟ್ಟುಕೊಂಡು ನರ್ತಿಸುತ್ತಾಳಲ್ಲ ಹಾಗೆ. ಪಶ್ಚಿಮ ಭಾರತದ ಹೆಂಗಸರು ತಲೆ ಮೇಲೆ ನೀರಿನ ಕೊಡ ಹೊತ್ತುಕೊಂಡು ನಗುತ್ತ ನಗುತ್ತ ನಡೆದು

ಹೋಗುವುದನ್ನು ನೋಡಿಲ್ಲವೆ ನೀನು?'' ಆ ಮಹಿಳೆಯರು ನಡೆಯುತ್ತಿದ್ದರೂ, ನಗುತ್ತಿದ್ದರೂ, ಮಾತನಾಡುತ್ತಿದ್ದರೂ ಅವರ ಗಮನ ತಲೆಯ ಮೇಲಿನ ಕೊಡದ ಕಡೆಗೇ ಇರುತ್ತದೆ. ಹಾಗೆಯೇ ನಾವು ಸಾಂಸಾರಿಕ ಕೆಲಸಗಳಲ್ಲಿ ತೊಡಗಿದ್ದರೂ ನಮ್ಮ ಗಮನ ಭಗವಂತನ ಕಡೆಗೇ ಇರಬೇಕೆಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ. ಈ ಸಂದರ್ಭದಲ್ಲಿ ಇನ್ನೊಂದು ಕಥೆಯನ್ನು ಉದಾಹರಿಸಬಹುದು.

ಒಬ್ಬ ದೊಂಬರಾಟದವನಿದ್ದ. ಆತ ತುಂಬ ಆಶ್ಚರ್ಯಕರವಾದ ಸರ್ಕಸ್ ಮಾಡುತ್ತಿದ್ದ. ಅವನು ಹಿಮ್ಮುಖವಾಗಿ ತಲೆ ಬಗ್ಗಿಸಿಕೊಂಡು ನಿಂತುಕೊಂಡು, ಹಣೆಯ ಮೇಲೆ ಒಂದು ಉದ್ದನೆಯ ಗಳುವನ್ನು ನೇರವಾಗಿ ತನ್ನ ಕೈಯಲ್ಲಿ ಮುಟ್ಟದೆ ನಿಲ್ಲಿಸಿಕೊಳ್ಳುತ್ತಿದ್ದ. ಆತನ ಮಗಳು, ಚಿಕ್ಕ ಹುಡುಗಿ, ಆ ಗಳುವಿನ ಮೇಲೆ ಹತ್ತಿಹೋಗಿ ಅದರ ತುದಿಯಲ್ಲಿ ವಿವಿಧ ಬಗೆಯ ಸರ್ಕಸ್ ಮಾಡುತ್ತಿದ್ದಳು. ಈ ಚಮತ್ಕಾರವನ್ನು ನೋಡಿ ಜನರು ಆಶ್ಚರ್ಯದಿಂದ ಚಪ್ಪಾಳೆ ತಟ್ಟಿ, ಹಣದ ನೋಟುಗಳನ್ನು ಅವರ ಕಡೆ ಎಸೆಯುತ್ತಿದ್ದರು. ಕಾರ್ಯಕ್ರಮ ಮುಗಿದ ಮೇಲೆ ಆ ಹಣವನ್ನೆಲ್ಲ ಸಂಗ್ರಹಿಸಿ ಮಗಳನ್ನು ಕರೆದುಕೊಂಡು ಮನೆಗೆ ಹೋಗುತ್ತಿದ್ದ. ಒಂದು ದಿನ ತಂದೆ ಮಗಳಿಗೆ ಹೇಳಿದ: ''ನೀನು ಚೆನ್ನಾಗಿ ಸರ್ಕಸ್ ಮಾಡಿದರೆ ಜನ ಮೆಚ್ಚಿ ಹಣ ಕೊಡುತ್ತಾರೆ. ಆ ಹಣದಿಂದ ನಾನು ನಿನ್ನನ್ನು ಸಾಕಿ ಸಲಹಿ ವಿದ್ಯಾವಂತಳನ್ನಾಗಿ ಮಾಡಬಹುದು. ಆದ್ದರಿಂದ ನೀನು ನನ್ನನ್ನು ನೋಡಿಕೊಳ್ಳಬೇಕು, ನಾನು ನಿನ್ನನ್ನು ನೋಡಿಕೊಳ್ಳಬೇಕು.'' ಮಗಳು ತುಂಬ ಜಾಣೆ, ಅವಳು ಹೇಳಿದಳು: ''ಹಾಗಲ್ಲ, ಅಪ್ಪ, ನಾನು ನನ್ನನ್ನು ನೋಡಿಕೊಳ್ಳಬೇಕು, ನೀನು ನಿನ್ನನ್ನು ನೋಡಿಕೊಳ್ಳಬೇಕು.'' ''ಅದು ಹೇಗೆ?'' ತಂದೆ ಕೇಳಿದ. ಮಗಳ ಉತ್ತರ: ''ನೀನು ನಿನ್ನ ಹಣೆಯ ಮೇಲೆ ಗಳುವನ್ನು ನೇರವಾಗಿ ನಿಲ್ಲಿಸಿಕೊಂಡಾಗ ನಿನ್ನ ಗಮನ ವೆಲ್ಲ ಗಳುವಿನ ಕಡೆಗೇ ಇರಬೇಕಲ್ಲವೆ? ಜನರ ಕಡೆಗೆ ಅಥವಾ ನನ್ನ ಕಡೆಗೆ ಹೋದರೆ ನಿನ್ನ ಬ್ಯಾಲೆನ್ಸ್ ತಪ್ಪಿಹೋಗುತ್ತದೆ, ನಾನೂ ಬಿದ್ದುಬಿಡುತ್ತೇನೆ. ಹಾಗೆಯೇ ಗಳುವಿನ ತುದಿಯಲ್ಲಿ ಸರ್ಕಸ್ ಮಾಡುತ್ತಿರುವಾಗ ನನ್ನ ಗಮನವೆಲ್ಲ ನನ್ನ ಕಡೆಗೇ ಇರಬೇಕು. ಆ ಕಡೆ ಈ ಕಡೆ ಹೋಯಿತೆಂದರೆ ಮುಗೀತು, ಇಡೀ ಸರ್ಕಸ್ ಕೆಟ್ಟು ಹೋಗುತ್ತದೆ. ಆದ್ದರಿಂದ ನಾನು ನನ್ನನ್ನು ನೋಡಿಕೊಳ್ಳಬೇಕು, ನೀನು ನಿನ್ನನ್ನು ನೋಡಿಕೊಳ್ಳಬೇಕು.'' ಅದಕ್ಕಾಗಿಯೇ ಬಸವಣ್ಣ ನವರು ಹೇಳಿರುವುದು: ''**ಪರಚಿಂತೆ ಎಮಗೆ ಏಕೆ ಅಯ್ಯಾ! ಎಮ್ಮಯ ಚಿಂತೆ ಎಮಗೇ ಸಾಲದೆ? ಕೂಡಲಸಂಗಮ ಒಲಿ ಯನೊ ಒಲಿವನೊ ಎಂಬ ಚಿಂತೆ ಹಾಸಲುಂಟು ಹೊದೆಯ ಲುಂಟು.**''

ಶ್ರೀರಾಮಕೃಷ್ಣರು ಕೇಶವಚಂದ್ರನಿಗೆ ಹೇಳುತ್ತಿದ್ದಾರೆ: ''ಎಲ್ಲವನ್ನೂ ತ್ಯಜಿಸಿ ಭಗವಂತನನ್ನು ಕರೆ. ಆತನೇ ಸತ್ಯ, ಉಳಿದುದೆಲ್ಲ ಅನಿತ್ಯ. ಆತನ ಸಾಕ್ಷಾತ್ಕಾರ ಮಾಡಿಕೊಳ್ಳದಿದ್ದರೆ ಎಲ್ಲವೂ ವ್ಯರ್ಥ. ಇದೇ ಮಹಾಮಂತ್ರ.'' ಇಲ್ಲಿ ಶ್ರೀರಾಮಕೃಷ್ಣರು ಮನುಷ್ಯ ಜೀವನದ ಸಾರ್ಥಕತೆಯ ಬಗ್ಗೆ ಹೇಳುತ್ತಿದ್ದಾರೆ. ಈ ಮಾನುಷ ಜನ್ಮವನ್ನು ಪಡೆದಿರುವುದೇ ಈ ವ್ಯಕ್ತಿತ್ವದ ಸಾರಭೂತವಾದ ಭಗವದ್ವಸ್ತುವನ್ನು ಪಡೆಯುವುದಕ್ಕಾಗಿ, ಮುಕ್ತಿಯನ್ನು ಪಡೆಯುವುದಕ್ಕಾಗಿ. ಇಲ್ಲಿ ಭಾಗವತದ ಒಂದು ಪ್ರಸಿದ್ಧ ಶ್ಲೋಕ ಮನಸ್ಸಿಗೆ ಬರುತ್ತದೆ:

**ನೃದೇಹಮಾದ್ಯಂ ಸುಲಭಂ ಸುದುರ್ಲಭಂ**
**ಪ್ಲವಂ ಸುಕಲ್ಪಂ ಗುರುಕರ್ಣಧಾರಮ್ ।**
**ಮಯಾನುಕೂಲೇನ ನಭಸ್ವತೇರಿತಂ**
**ಪುಮಾನ್ ಭವಾಬ್ಧಿಂ ನ ತರೇತ್ ಸ ಆತ್ಮಹಾ ॥**

*(೧೧.೨೦.೧೭)*

'' ಈ ನರದೇಹ ಒಂದು ದೋಣಿ ಇದ್ದಂತೆ. ಈ ದೋಣಿ ನಡೆಸುವವನು ಗುರು. ಅನುಕೂಲ ಗಾಳಿಯೆಂಬ ಭಗವದನುಗ್ರಹವಿದೆ. ಇವೆಲ್ಲವನ್ನು ಪಡೆಯುವುದು ಸುಲಭಸಾಧ್ಯವಲ್ಲ. ಇಷ್ಟಾದರೂ ಮನುಷ್ಯನು ಸಂಸಾರ ಸಾಗರವನ್ನು ದಾಟಲು ಪ್ರಯತ್ನಿಸದಿದ್ದರೆ ಅವನು ತನ್ನನ್ನು ತಾನು ನಾಶಪಡಿಸಿಕೊಳ್ಳುತ್ತಾನೆ.''

ನಮ್ಮ ಜೀವನಕ್ಕೊಂದು ಅರ್ಥವಿರಬೇಕು. ಅರ್ಥವಿಲ್ಲದ ಜೀವ ವ್ಯರ್ಥವೇ. ಜೀವನದಲ್ಲಿ ಅರ್ಥವನ್ನು ಕಂಡುಕೊಳ್ಳಬೇಕೆಂಬ ತುಡಿತ ಎಲ್ಲರಲ್ಲೂ ಇರುತ್ತದೆಯೆಂದೂ, ಅನೇಕ ವೈಯಕ್ತಿಕ ಹಾಗೂ ಸಾಮಾಜಿಕ ಕಾರಣಗಳಿಂದಾಗಿ ಈ ತುಡಿತವು ದಮನ ಮಾಡಲ್ಪಟ್ಟಾಗ ಅದು ಇಂದ್ರಿಯಭೋಗಗಳ ಆಸೆಯಾಗಿಯೋ, ಅಧಿಕಾರ ಲಾಲಸೆಯಾಗಿಯೋ ಹೊರಹೊಮ್ಮುತ್ತದೆಂದು ಪ್ರಸಿದ್ಧ ಮನಶ್ಶಾಸ್ತ್ರಜ್ಞನಾದ ವಿಕ್ಟರ್ ಇ. ಫ್ರಾಂಕ್ಲ್ ಅಭಿಪ್ರಾಯಪಡುತ್ತಾರೆ. ಆಂತರಿಕ ಅಭಿವ್ಯಕ್ತಿಯೇ ಜೀವನಕ್ಕೆ ಸಾರ್ಥಕತೆಯನ್ನು ಕೊಡುವುದು. ಒಂದು ಬೀಜವನ್ನು ಅಡಿಗೆಗೂ ಉಪಯೋಗಿಸಬಹುದು. ಅಲಂಕಾರಕ್ಕೂ ಆಟಕ್ಕೂ ಉಪಯೋಗಿಸಬಹುದು. ಆದರೆ ಅದು ಸಾರ್ಥಕವಾಗುವುದು ತನ್ನೊಳಗಿನ ಸತ್ತ್ವವನ್ನು ಹೊರಗೆ ವ್ಯಕ್ತಪಡಿಸಿ ಅದು ಹೆಮ್ಮರವಾಗಿ ಬೆಳೆದಾಗಲೇ. ನಮ್ಮ ಜೀವನದಲ್ಲಿ ಅನೇಕ ಬಗೆಯ ಅಭಿವ್ಯಕ್ತಿಗಳನ್ನು ನಾವು ಗುರುತಿಸಬಹುದು. ೧) ನಮ್ಮೊಳಗಿರುವ ಪ್ರತಿಭೆ ಸಾಮರ್ಥ್ಯಗಳ ಅಭಿವ್ಯಕ್ತಿ, ೨) ನಮ್ಮ ಅಂತಃಸ್ವಭಾವವಾದ ಒಳ್ಳೆಯತನದ ಅಭಿವ್ಯಕ್ತಿ, ೩) ಪ್ರೀತಿ, ದಯೆ ಇತ್ಯಾದಿಗಳ ಅಭಿವ್ಯಕ್ತಿ, ೪) ಕೊನೆಯದಾಗಿ ದಿವ್ಯತೆಯ ಅಭಿವ್ಯಕ್ತಿ. ಈ ಎಲ್ಲ ಅಭಿವ್ಯಕ್ತಿಗಳೂ ಜೀವನಕ್ಕೆ ಅರ್ಥವನ್ನು ನೀಡುತ್ತವೆ. ಆದರೆ ದಿವ್ಯತೆಯ ಅಭಿವ್ಯಕ್ತಿ ಅತ್ಯುನ್ನತ ಅರ್ಥವನ್ನು ನೀಡುತ್ತದೆ.

***(ಮುಂದುವರಿಯುವುದು)***